O.S.No.: 123/2009

D.W.:1

ಈ ದಿನ ದಿಃ 29-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ. ಈ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ. ಪೀರು ನಮ್ಮ ಮುತ್ತಜ್ಜ ಎಂದರೆ ಸರಿ . ಅವರಿಗೆ ಸುಬ್ಬರಾಥ ಕೃಷ್ಣಾ, ಅಂತು, ಕಲ್ಲು ಮತ್ತು ಮಲ್ಲು ಅಂತಾ 5 ಜನ ಮಕ್ಕಳು ಎಂದರೆ ಸರಿ. ಪೀರು ಮತ್ತು ಅವನ 5 ಜನ ಮಕ್ಕಳು ಈ ತೀರಿಕೊಂಡಿರುತ್ತಾರೆಂದರೆ ಸರಿ. ಸುಬ್ಬರಾವನ ಹೆಂಡತಿ ದ್ವಾರ್ವಕಾಬಾಯಿ ಹಾಗೂ ಅವರಿಗೆ ಯಾವುದೇ ಮಕ್ಕಳು ಇಲ್ಲ ಎಂದರೆ ಸರಿ . ಕೃಷ್ಣ ನಮ್ಮ ತಂದೆ ಅವರಿಗೆ ನಾವು ಎರಡು ಜನ ಗಂಡು ಮಕ್ಕಳು ಹಾಗೂ ಎರಡು ಜನ ಹೆಣ್ಣು ಮಕ್ಕಳು ಎಂದರೆ ಸರಿ . ಅವರೆಂದರೆ ಅಶೋಕ, ಚಂದ್ರಕಾಂತ, ಗುಣವಂತಿ ವತ್ತು ಹೀರಾಬಾಯಿ ಎಂದರೆ ಸರಿ. ಅದೇ ರೀತಿ ಅಂತುಗೆ ವಾದಿ, ಪ್ರತಿವಾದಿ ನಂಃ 5, 6 ಮತ್ತು 9 ಮಕ್ಕಳು ಎಂದರೆ ಸರಿ. ಕಲ್ಲುನ ಹೆಂಡತಿ ಶಾಂತಾಬಾಯಿ 10 ನೇ ಪ್ರತಿವಾದಿ ಎಂದರೆ ಸರಿ. ಈಗ ಶಾಂತಾಬಾಯಿ ತೀರಿಕೊಂಡಿರುತ್ತಾರೆ . ಅವರು ಮಗಳು ಲಕ್ಷ್ಮೀ ಉರ್ಫ ಕಾಶಿಬಾಯಿ ಎಂದರೆ ಸರಿ. ಕಲ್ಲುನಿಗೆ ಲಕ್ಷ್ಮೀ ಒಬ್ಬಳೇ ಮಗಳು , ಯಾವುದೇ ಗಂಡು ಮಕ್ಕಳಿಲ್ಲ ಎಂದರೆ ಸರಿ. ಅದೇ ರೀತಿ ಮಲ್ಲುನಿಗೆ 2 ನೇ ವಾದಿ ಮತ್ತು 7 ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ.

ಸುಬ್ಬರಾವ ಬೋಜ ಗ್ರಾಮದ ದ್ವಾರ್ವಕಾಬಾಯಿಯನ್ನು ಮದುವೆ ಮಾಡಿಕೊಂಡಿರುತ್ತಾರೆಂದರೆ ಸರಿ . ಮದುವೆಯಾದ ನಂತರ ಸುಬ್ಬರಾವ ತನ್ನ ಹೆಂಡತಿಯ ಊರಾದ ಭೋಜ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸಾಕ್ಷಿಯು ಕೊಥಳಿಯಲ್ಲಿದ್ದರು ಎಂದು ನುಡಿಯುತ್ತಾರೆ. ಸುಬ್ಬರಾವ ಮೃತನಾಗುವ ತನಕ ಭೋಜ ಗ್ರಾಮದಲ್ಲಿ ವಾಸವಿದ್ದನು ಎಂದರೆ ಸರಿ ಅಲ್ಲ . ಸುಬ್ಬರಾವ ಕೋಥಳಿಯಲ್ಲಿ ಮೃತಪಟ್ಟಿರುತ್ತಾನೆ. ದ್ವಾರ್ವಕಾಬಾಯಿ ಭೋಜ ಗ್ರಾಮದಲ್ಲಿ ಮೃತಪಟ್ಟಿರುತ್ತಾಳೆ. ಸುಬ್ಬರಾವ ಭೋಜ ಗ್ರಾಮದಲ್ಲಿ ತೀರಿಕೊಂಡಿರುತ್ತಾನೆಂದರೆ ಸರಿ ಅಲ್ಲ . ದ್ವಾರ್ವಕಾಬಾಯಿ ಮತ್ತು ಸುಬ್ಬರಾವ ಭೋಜ ಗ್ರಾಮದಲ್ಲಿ ತೀರಿಕೊಂಡಿರುತ್ತಾರೆಂದರೆ ಸರಿ ಅಲ್ಲ . ಅವರು ಯಾವತ್ತು ಕೋಥಳಿಗೆ ಬಂದಿಲ್ಲ ಎಂದರೆ ಸರಿ ಅಲ್ಲ.

ಚಂದ್ರಕಾಂತ ಎಲ್ಲಿರುತ್ತಾನೆಂದು ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅವನು ನಿಪ್ಪಾಣಿ ಆಂದೋಲನ ಇದ್ದಾಗ ಹೋಗಿರುತ್ತಾನೆಂದು ಉತ್ತರಿಸುತ್ತಾನೆ. ಈಗ ಚಂದ್ರಕಾಂತ ಎಲ್ಲಿರುತ್ತಾನೆಂದು ನನಗೆ ಗೊತ್ತಿಲ್ಲ . ಚಂದ್ರಕಾಂತ ನಿಪ್ಪಾಣಿಯ ಆಂದೋಲನಕ್ಕೆ ಹೋಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ . ಚಂದ್ರಕಾಂತ ನಾಪತ್ತೆಯಾಗಿದ್ದಾನೆಂದರೆ ಸರಿ. ನನ್ನ ಮುತ್ತಜ್ಜನಿಗೆ ಈ ಮೇಲೆ ಹೇಳಿದ ವಾರಸುದಾರರನ್ನು ಬಿಟ್ಟು ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿ.

ನನಗೆ ದಾವಾ ಆಸ್ತಿ ಅನುಬಂಧ 'ಅ' ಮತ್ತು 'ಬ' ದ ಚಕ್ಕಬಂದಿಯನ್ನು ಹೇಳಲು ಬರುವುದಿಲ್ಲ. ನನ್ನ ಜಮೀನುಗಳ ಸರ್ವೆ ನಂಃ 91/1, 79/15 ಹಾಗೂ 79/19 ಎಂದು ಇರುತ್ತವೆ. 91/1 ರ ಮೂಲ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸರ್ವೆ ನಂಃ 91/3 ರಲ್ಲಿ ಮೂರು ಎಕರೆ 14 ಗುಂಟೆ, 79/15 ರಲ್ಲಿ 30 ಗುಂಟೆ ಹಾಗೂ 79/19 ರಲ್ಲಿ ಎರಡು ಗುಂಟೆ ಜಮೀನು ಇದೆ ಎಂದರೆ ಸರಿ . ದಾವಾ ಜಮೀನುಗಳು ನಮ್ಮ ಕಬ್ಜಾದಲ್ಲಿ ಇರುವುದಿಲ್ಲ ಹಾಗೂ ನಾನು ಯಾವತ್ತು ದಾವಾ ಜಮೀನುಗಳಿಗೆ ಹೋಗದ ಕಾರಣ ನನಗೆ ಚಕ್ಕಬಂದಿಯನ್ನು ಹೇಳಲು ಬರುವುದಿಲ್ಲ ಎಂದರೆ ಸರಿ ಅಲ್ಲ . ದಾವಾ ಜಮೀನುಗಳು ವಾದಿ ಹಾಗೂ ಪ್ರತಿವಾದಿ ನಂಃ 10 ಎ ಇವರ ಸ್ವಾಧೀನದಲ್ಲಿವೆ ಎಂದರೆ ಸರಿ. ನಾವು, ನಮ್ಮ ತಂದೆ ಮತ್ತು ಕುಟುಂಬದವರು ಕೋಥಳಿಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ ಅಲ್ಲ. ನಾನು ಮತ್ತು ನಮ್ಮ ತಂದೆ ದಾವೆ ಹಾಕಿದ ನಂತರ ಸರ್ವೆ ನಂಃ 91/3 ನು್ನ ಒಟ್ಟುಗೂಡಿಸಿ ಸರ್ವೆ ನಂಃ 91/1 ಅಂತಾ ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ತಿದ್ದುಪಡಿ ಮಾಡಿಸಿರುತ್ತೇವೆಂದರೆ ಸರಿ ಅಲ್ಲ. ನಿಡಿ 10 ರಲ್ಲಿ ಸರ್ವೆ ನಂಃ 91/3 ಅಂತಾ ನಮೂದು ಇದೆ ಎಂದರೆ ಸರಿ . 1970 ರಿಂದ ದಾವೆ ದಾಖಲಿಸುವ ತನಕ ಸರ್ವೆ ನಂಃ 91/3 ಮುಂದುವರೆದುಕೊಂಡು ಬಂದಿದೆ ಎಂದರೆ ಸರಿ. ನಮ್ಮ ಮುತ್ತಜ್ಜ ಪೌತಿಯಾದ ನಂತರ ಎಲ್ಲ ಜಮೀನುಗಳು ಅವರ ಮಕ್ಕಳ ಹೆಸರಿನಲ್ಲಿ ಜಂಟಿಯಾಗಿ ಬಂದಿವೆ ಎಂದರೆ ಸರಿ ಅಲ್ಲ. ನಮ್ಮ ಅಜ್ಜ ಪೀರು ತೀರಿಕೊಂಡ ನಂತರ ಇಲ್ಲಿಯತನಕ ಅವರ ಮಕ್ಕಳ ನಡುವೆ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿ ಅಲ್ಲ. ನಾನು ವಿಭಾಗವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ . ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗದ ಕಾರಣ ಉತಾರದಲ್ಲಿ ಎಲ್ಲರ ಹೆಸರು ಜಂಟಿಯಾಗಿ ನಮೂದಾಗಿವೆ ಎಂದರೆ ಸರಿ ಅಲ್ಲ. ವಿಭಾಗವು ಮೌಖಿಕವಾಗಿ ಮಾತ್ರ ಆಗಿದೆ. ವಿಭಾಗವು ಕಾಗದ ಪತ್ರದ ಮುಖಾಂತರ ಆಗಿಲ್ಲ. ಯಾವುದೇ ವಿಭಾಗವಾಗದ ಕಾರಣ ಯಾವುದೇ ವಿವಾದ ಪತ್ರ ತಯಾರಿಸಿರುವುದಿಲ್ಲ ಎಂದರೆ ಸರಿ ಅಲ್ಲ . ಸಾಕ್ಷಿ ಮುಂದುವರೆದು ಮೌಖಿಕವಾಗಿ ವಿಭಾಗವಾಗಿವೆ ಎಂದು ನುಡಿಯುತ್ತಾರೆ. ವಿಭಾಗದ ಪ್ರಕಾರ ಯಾರು ಯಾರಿಗೆ ಎಷ್ಟು ಎಷ್ಟು ಜಮೀನು ಬಂದಿವೆ ಹಾಗೂ ಅವುಗಳ ಚಕ್ಕಬಂದಿಯನ್ನು ನನಗೆ ಹೇಳಲು ಬರುವುದಿಲ್ಲ . ನಮ್ಮ ಕುಟುಂಬದಲ್ಲಿ ವಿಭಾಗವಾಗದ ಕಾರಣ ನನಗೆ ಅವುಗಳ ಚಕ್ಕಬಂದಿ ಹೇಳಲು ಬರುವುದಿಲ್ಲ ಎಂದರೆ ಸರಿ ಅಲ್ಲ.

ವಾದಿಯರು ದಾವೆ ಸಲ್ಲಿಸುವ ಪೂರ್ವದಲ್ಲಿ ನಮಗೆ ಮತ್ತು ನಮ್ಮ ತಂದೆಗೆ ದಾವಾ ಆಸ್ತಿಗಳನ್ನು ಹಿಸ್ಸೆ ಮಾಡುವಂತೆ ಕೇಳಿರುತ್ತಾರೆಂದರೆ ಸರಿ ಅಲ್ಲ. ನಾವು ಅವರಿಗೆ ಹಿಸ್ಸೆ ಕೊಡಲು ನಿರಾಕರಿಸಿದ್ದರಿಂದ ಅವರು ದಾವಾ ದಾಖಲಿಸಿರುತ್ತಾರೆಂದರೆ ಸರಿ ಅಲ್ಲ.

ಸುಬ್ಬರಾಮ ಯಾವ ತಾರೀಖಿನಂದು ತೀರಿಕೊಂಡಿರುತ್ತಾನೆಂದು ಹೇಳಲು ಬರುವುದಿಲ್ಲ. ಅವನು ಈಗ ಮೃತನಾಗಿ ಸುಮಾರು 85 ವರ್ಷಗಳಾಗಿವೆ. ಸುಬ್ಬರಾವ ದಿನಾಂಕಃ 29-07-1977 ರಲ್ಲಿ ತೀರಿಕೊಂಡಿರುತ್ತಾನೆಂದರೆ ಸರಿ. ಅದೇ ರೀತಿ ದ್ವಾರಕಾಬಾಯಿ ದಿಃ 10-12-1994 ರಲ್ಲಿ ತೀರಿಕೊಂಡಿರುತ್ತಾಳೆ. ಸುಬ್ಬರಾವ ಭೋಜ ಗ್ರಾಮದಲ್ಲಿ ಪೌತಿಯಾಗಿರುತ್ತಾನೆ ಅಂತಾ ನಿಡಿ 11 ರಲ್ಲಿ

ನಮೂದಾಗಿದೆ ಎಂದರೆ ಸರಿ ಅಲ್ಲ. ದ್ವಾರಕಾಬಾಯಿ ತೀರಿಕೊಂಡ ನಂತರ ನಿಡಿ 11 ಆಗಿದೆ ಎಂದರೆ ಸರಿ. ನಿಡಿ 11 ತಯಾರಿಸಲು ದ್ವಾರಕಾಬಾಯಿ ಅರ್ಜಿ ಕೊಟ್ಟಿಲ್ಲ ಎಂದರೆ ಸರಿ . ದ್ವಾರಕಾಬಾಯಿ ಮೃತ ಪಟ್ಟಾಗ ಅವಳಿಗೆ ಸುಮಾರು 60 ವರ್ಷ ವಯಸ್ಸಾಗಿತ್ತು. ದ್ವಾರಕಾಬಾಯಿ ಮೃತ ಪಡುವ ಸಮಯದಲ್ಲಿ ಸುಮಾರು 85 ರಿಂದ 90 ವರ್ಷ ವಯಸ್ಸಾಗಿತ್ತು ಎಂದರೆ ಸರಿ ಅಲ್ಲ . ದ್ವಾರಕಾಬಾಯಿಗೆ ವಯಸ್ಸಾಗಿರುವುದರಿಂದ ಅವಳಿಗೆ ಜ್ಞಾನ ಇರಲಿಲ್ಲ ಎಂದರೆ ಸರಿ ಅಲ್ಲ. ದ್ವಾರಕಾಬಾಯಿ ಖಾಯಂ ಆಗಿ ಭೋಜ ಗ್ರಾಮದಲ್ಲಿ ವಾಸವಾಗಿದ್ದು, ಅವಳನ್ನು 1 ನೇ ವಾದಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿ ಅಲ್ಲ. ಅವಳ ಔಷಧೋಪಚಾರ ಹಾಗೂ ಆರೈಕೆಯನ್ನು 1 ನೇ ವಾದಿ ಮಾಡುತ್ತಿದ್ದ ಎಂದರೆ ಸರಿ ಅಲ್ಲ. ನಿಡಿ 7 ರಲ್ಲಿ ಬರೆದಿರುವ ಬರವಣಿಗೆ ಅಪ್ಪಾಸಾಬ ಗೋಟೂರೆ ಇವರದ್ದು. ನಿಡಿ 7 ರಲಿಲರುವ ಸಾಕ್ಷಿದಾರರ ಹೆಸರು ಸುರೇಶ ದಾದು ಗೌರೋಜಿ ಮತ್ತು ಸುಕುಮಾರ ಗಜನ್ನವರ ಎಂದು ಇರುತ್ತದೆ. ಅಪ್ಪಾಸಾಬ ಗೋಟೂರೆರವರು ತಲಾಟಿ ಇರಲಿಲ್ಲ. ಸಾಕ್ಷಿ ಮುಂದುವರೆದು ತಲಾಟೆಯವರ ಕೈಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಡಿ 7 ರಲ್ಲಿ ಸಾಕ್ಷಿದಾರರ ಸಹಿಗಳ ಕೆಳಗೆ ಹೆಸರು ಬರೆದಿಲ್ಲ ಎಂದರೆ ಸಾಕ್ಷಿ ಒಬ್ಬರ ಹೆಸರು ಮಾತ್ರ ಬರೆದಿದೆ ಎಂದು ನುಡಿಯುತ್ತಾರೆ . ಗೌರಾಜರವರು ಮೃತ ಪಟ್ಟು ಒಂದು ವರ್ಷವಾಗಿದೆ ಹಾಗೂ ಗೊಟೊರೆರವರು ತೀರಿಕೊಂಡು 15-16 ವರ್ಷಗಳಾಗಿವೆ. ಮೃತ್ಯು ಪತ್ರವನ್ನು ನೋಂದಣಿ ಮಾಡಲು ತೊಂದರೆ ಇರಲಿಲ್ಲ. ನಿಡಿ 7 ಮೃತ್ಯುಪತ್ರವನ್ನು ದ್ವಾರಕಾಬಾಯಿ ಬರೆದುಕೊಟ್ಟಿಲ್ಲ ಹಾಗೂ ಅದರಲ್ಲಿರುವ ಸಹಿ ದ್ವಾರಕಾಬಾಯಿಯ ಸಹಿ ಅಲ್ಲ ಎಂದರೆ ಸರಿ ಅಲ್ಲ. ನಿಡಿ 7 ರಲ್ಲಿ ಬರೆದಿರುವ ಎಲ್ಲ ವಿಷಯಗಳು ಸುಳ್ಳು ಎಂದರೆ ಸರಿ ಅಲ್ಲ. ನಿಡಿ 7 ನ್ನು ದ್ವಾರಕಾಬಾಯಿ ಮೃತ ಪಟ್ಟ ನಂತರ ಖೊಟ್ಟಿಯಾಗಿ ತಯಾರಿಸಿರುತ್ತೇವೆಂದರೆ ಸರಿ ಅಲ್ಲ . ದ್ವಾರಕಾಬಾಯಿ ಮೃತ ಪಟ್ಟ ನಂತರ ಮೃತ್ಯು ಪತ್ರ ತಯಾರಿಸಿರುವ ಕಾರಣ ಅದನ್ನು ನೋಂದಣಿ ಮಾಡಿಸಿಲ್ಲ ಎಂದರೆ ಸರಿ ಅಲ್ಲ. ಬಾಂಡ ಪೇಪರ ಎಲ್ಲ ಕಡೆ ಸಿಗುತ್ತವೆ ಆದರೆ ಮೃತ್ಯು ಪತ್ರವನ್ನು ಬಾಂಡ ಪೇಪರ ಮೇಲೆ ಮಾಡಿಲ್ಲ ಎಂದರೆ ಸರಿ. ಮೃತ್ಯು ಪತ್ರವನ್ನು ದ್ವಾರಕಾಬಾಯಿ ಸತ್ತ 10 ವರ್ಷಗಳ ನಂತರ ತಯಾರಿಸಿರುವುದರಿಂದ ಅದನ್ನು ಬಾಂಡ ಪೇಪರ ಮೇಲೆ ಬರೆಸಿಲ್ಲ ಎಂದರೆ ಸರಿ ಅಲ್ಲ . ಮೃತ್ಯು ಪತ್ರವನ್ನು ನೋಟರಿಯವರ ಮುಂದೆ ಮಾಡಿಕೊಳ್ಳಬಹುದಿತ್ತು ಎಂದರೆ ಸರಿ ಅಲ್ಲ . ಮೃತ್ಯು ಪತ್ರವನ್ನು ದ್ವಾರಕಾಬಾಯಿ ತೀರಿಕೊಂಡ ನಂತರ ತಯಾರಿಸಿರುವುದರಿಂದ ಅವನ್ನು ನೋಟರಿಯವರ ಮುಂದೆ ತಯಾರಿಸಿಲ್ಲ ಎಂದರೆ ಸರಿ ಅಲ್ಲ . ನಿಡಿ 7 ಮೃತ್ಯು ಪತ್ರದಲ್ಲಿ ಚಕ್ಕಬಂದಿಯನ್ನು ನಮೂದಿಸಿರುವುದಿಲ್ಲ. ದ್ವಾರಕಾಬಾಯಿ 05-11-1994 ರಲ್ಲಿ ಭೋಜ ಗ್ರಾಮದಲ್ಲಿ ಇದ್ದಳು ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿ ಇದ್ದಳು ಎಂದು ನುಡಿಯುತ್ತಾರೆ . ದ್ವಾರಕಾಬಾಯಿ ಎಂದಿಗೂ ನಮ್ಮ ಮನೆಯಲ್ಲಿ ಇರಲಿಲ್ಲ ಎಂದರ ಸರಿ ಅಲ್ಲ. ದ್ವಾರಕಾಬಾಯಿಯ ಪಾಲನೆ ಪೋಷಣೆಯನ್ನು ಎಂದಿಗೂ ನಾವು ಮಾಡಿಲ್ಲ ಎಂದರೆ ಸರಿ ಅಲ್ಲ . ನಿಡಿ 7 ಮೃತ್ಯು ಪತ್ರವನ್ನು ಗೊಟೊರೆಯವರು ಬರೆದಿರುವುದಿಲ್ಲ ಮತ್ತು ಅದರಲ್ಲಿ

ಸಾಕ್ಷಿ ಸಹಿಗಳು ನಮ್ಮ ತಂದೆಯವರ ಸ್ನೇಹಿತರು ಎಂದರೆ ಸರಿ ಅಲ್ಲ. ನಿಡಿ 7 ನ್ನು ನಮ್ಮ ತಂದೆ ಮತ್ತು ಸಾಕ್ಷಿದಾರರು ಕೂಡಿ ಖೊಟ್ಟಿಯಾಗಿ ತಯಾರಿಸಿರುತ್ತಾರೆಂದರೆ ಸರಿ ಅಲ್ಲ. ದ್ವಾರಕಾಬಾಯಿ



ಎಂದಿಗೂ ನಮಗೆ ತನ್ನ ಆಸ್ತಿಯನ್ನು ಕೊಟ್ಟಿಲ್ಲ ಎಂದರೆ ಸರಿ ಅಲ್ಲ . ದ್ವಾರಕಾಬಾಯಿ ಮೃತ ಪಟ್ಟ ನಂತರ ಎರಡು ಮನೆಯ ದಾಖಲೆಗಳಲ್ಲಿ ಅವಳ ಗಂಡನ ಹೆಸರು ನಮುದಾಗಿತ್ತು ಎಂದರೆ ಸರಿ ಅಲ್ಲ. ದ್ವಾರಕಾಬಾಯಿ ಮೃತ ಪಟ್ಟ ನಂತರ ನಿಡಿ 18 ರಂತೆ ಅವರ ಹೆಸರನ್ನು ದಾಖಲಿಸಿರುತ್ತಾರೆಂದರೆ ಸರಿ ಅಲ್ಲ. 1994 ರಿಂದ ಇಲ್ಲಿಯತನಕ ಮೃತ್ಯು ಪತ್ರದ ಆಧಾರದಿಂದ ಯಾವ ಕಾರಣಕ್ಕೆ ನಮ್ಮ ಹೆಸರನ್ನು ಬದಲಾಯಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ನಮಗೆ ಸ್ವಲ್ಪ ಅಡಚಣೆ ಇದುದ, ಮುಂದೆ ಹಚ್ಚಿ ಕೊಳ್ಳಬೇಕು ಅಂತಾ ಬಿಟ್ಟಿರುತ್ತೇವೆಂದು ಉತ್ತರಿಸುತ್ತಾರೆ . ದ್ವಾರಕಾಬಾಯಿ 1994 ರಲ್ಲಿ ಮೃತ್ಯು ಪತ್ರ ಬರೆದು ಕೊಟ್ಟಿಲ್ಲದ ಕಾರಣ ನಾವು ಇಲ್ಲಿಯತನಕ ನಮ್ಮ ಹೆಸರನ್ನು ಹಚ್ಚಿ ಕೊಳ್ಳಲು ಎಂದಿಗೂ ಪ್ರಯತ್ನಿಸಿಲ್ಲ ಎಂದರೆ ಸರಿ ಅಲ್ಲ . ಮೃತ್ಯು ಪತ್ರವನ್ನು ದಾವಾ ದಾಖಲಿಸಿದ ನಂತರ ಖೊಟ್ಟಿಯಾಗಿ ತಯಾರಿಸಿರುತ್ತೇವೆಂದರೆ ಸರಿ ಅಲ್ಲ. ನಾವು ಮೃತ್ಯು ಪತ್ರದ ಪ್ರಕಾರ ನಮಗೆ ಆಸ್ತಿ ಬರಬೇಕು ಅಂತಾ ದಾವೆ ದಾಖಲಿಸಿರುವುದಿಲ್ಲ. ಮೃತ್ಯು ಪತ್ರವು ಖೊಟ್ಟಿಯಾಗಿರುವುದರಿಂದ ನಾವು ದಾವೆ ದಾಖ್ಲಿಸಿಲ್ಲ ಎಂದರೆ ಸರಿ ಅಲ್ಲ . ಮೃತ್ಯು ಪತ್ರಕ್ಕೆ ಯಾವುದೇ ಸಾಕ್ಷಿದಾರರು ಸಹಿ ಮಾಡಿರುವುದಿಲ್ಲ , ಸಾಕ್ಷಿದಾರರ ಸಹಿಗಳ್ನು ನಾವೇ ಖೊಟ್ಟಿಯಾಗಿ ಮಾಡಿರುತ್ತೇವೆಂದರೆ ಸರಿ ಅಲ್ಲ . ಮೃತ್ಯು ಪತ್ರವನ್ನು ಗೋಟೊರೆಯವರು ಬರೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಮೃತ್ಯು ಪತ್ರ ಬರೆಯುವ ಕಾಲಕ್ಕೆ ಗೋಟೊರೆಯವರು ಮೃತಪಟ್ಟಿದ್ದರು ಎಂದರೆ ಸರಿ ಅಲ್ಲ. ಮೃತ್ಯು ಪತ್ರದ ಮೇಲೆ ಇರುವ ಸಹಿಯು ದ್ವಾರಕಾಬಾಯಿಯದು ಅಲ್ಲ ಎಂದರೆ ಸರಿ ಅಲ್ಲ . ಸುಬ್ಬರಾವ ಮತ್ತು ದ್ವಾರಕಾಬಾಯಿಯ ಹಿಸ್ಸೆ ಉಳಿದ ಹಿಸ್ಸೆದಾರರಿಗೆ ಹೋಗಬಾರದು ಅಂತಾ ನಾವು ಖೊಟ್ಟಿಯಾಗಿ ಮೃತ್ಯು ಪತ್ರವನ್ನು ತಯಾರಿಸಿರುತ್ತೇವೆಂದರೆ ಸರಿ ಅಲ್ಲ . ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಅವರು ಪೌತಿಯಾದ ನಂತರ ನಾವು ಮೃತ್ಯು ಪತ್ರವನ್ನು ಸೃಷ್ಠಿ ಮಾಡಿರುತ್ತೇವೆಂದರೆ ಸರಿ ಅಲ್ಲ.

ನಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಹೊರಬಿಸುತ್ತದೆ ಅಂತಾ ನನ್ನ ಪರವಾಗಿ ಮುಕ್ತಿಯಾರ ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿಯು ಅವರಿಗೆ ಪಾರ್ಶ್ವವಾಯು ಇರುವುದರಿಂದ ನನಗೆ ಮುಕ್ತಿಯಾರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಓಡಾಡುತ್ತಾರೆಂದರೆ ಸರಿ ಅಲ್ಲ. ಮನೆ ನಂ 280 ರಲ್ಲಿ 5 ಜನರ ಹೆಸರು ನಮೂದಾಗಿದೆ ಎಂದರೆ ಸರಿ . ಮನೆ ನಂಃ 274 ವಾದಿ ಮತ್ತು ಉಳಿದ ಪ್ರತಿವಾದಿಯರಿಗೆ ತಿಳಿಯದಂತೆ ನನ್ನ ತಂದೆಯವರು ತನ್ನ ಹೆಸರನ್ನು ದಾಖಲಿಸಿಕೊಂಡಿರುತ್ತಾರೆಂದರೆ ಸರಿ ಅಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದರಿಂದ ಆಲಿಸಿ ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತು ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.